ಆದರೆ ಗುರುಗಳು ಅಂದು ಅನ್ನ ಹಾಕಿ ತಮ್ಮ ಮನೆಯಲ್ಲಿ ಇರಿಸಿಕೊಳ್ಳದೇ ಇದ್ದಿದ್ದರೆ ನಾವು ಬೇರೆಲ್ಲಿ ಹೋಗಬೇಕಿತ್ತು? ಯಾವುದೋ ಬೀದಿಯಲ್ಲಿ ಜೀವನ ಮಾಡಬೇಕಿತ್ತು. ಗುರುಕುಲದಿಂದ ಹೋಗುವುದಕ್ಕೆ ನಮಗೆ ಬೇರೊಂದು ಮನೆಯೇ ಇರಲಿಲ್ಲ. ಮಹಾನುಭಾವರಾದ ಗುರುಗಳು ಸಿದ್ಧಪುರುಷರು. ನನ್ನ ಕಣ್ಣುಗಳಲ್ಲಿ ನೃತ್ಯ ಕಲಿಯುವುದಕ್ಕೆ ಇದ್ದ ಆಸೆಯನ್ನು ಅವರು ಗುರುತಿಸಿದರು. ಕಾಡಿನ ಕಳೆ ಗಿಡವಾಗಿದ್ದೆ ನಾನು. ಅವರು ನಮ್ಮನ್ನು ಅಮ್ಮನಂತೆ ಪೊರೆದು, ನನ್ನನ್ನು ಔಷಧೀಯ ಗಿಡವೆಂದು ಪರಿಗಣಿಸಿದರು. ಅವರಿಗೆ ಕೊಡುವುದಕ್ಕೆ ಗುರುದಕ್ಷಿಣೆ ಎಂದು ನಮ್ಮ ಬಳಿ ಏನೂ ಇರಲಿಲ್ಲ. ಆದ್ದರಿಂದ ನಾನು ಮಾತ್ರ ಭರತನಾಟ್ಯ ಕಲಿತೆ. ಈ ವೇಳೆಯಲ್ಲಿ ಶಕ್ತಿಗೆ ಕಲಿಕೆಯನ್ನು ಪೂರ್ತಿ ಮಾಡಲು ಸಾಧ್ಯವಾಗಲಿಲ್ಲ. ಅವಳು ತನ್ನಲ್ಲಿದ್ದ ಹಣವನ್ನೆಲ್ಲ ನನ್ನ ಖರ್ಚಿಗೆಂದೇ ಕೊಟ್ಟುಬಿಡುತ್ತಿದ್ದಳು. ಗುರುಗಳ ಅಂತ್ಯಕಾಲದವರೆಗೂ ಅವರ ಸೇವೆ ಮಾಡುವ ಭಾಗ್ಯ ನಮಗೆ ದೊರೆಯಿತು.

### ◆ ಹೇಗಿತ್ತು ಗುರುಕುಲದಲ್ಲಿ ಅಭ್ಯಾಸ ಕ್ರಮ?

ಗುರುಗಳ ಮನೆಯಲ್ಲಿಯೇ ಇದ್ದುದರಿಂದ ನನಗೆ ಅಮೃತವನ್ನೇ ಮೊಗೆ ಮೊಗೆದು ಕುಡಿಯುವ ಅವಕಾಶ ದೊರೆಯಿತು. ತರಗತಿಗೆ ಹಾಜರಾಗಿ ಕೇವಲ ನೃತ್ಯ ಪಾಠ ಕಲಿಯುತ್ತಿದ್ದೆವು. ಇತರರಿಗೆ ಕಲಿಸುವುದನ್ನು ನೋಡುತ್ತಿದ್ದೆವು. ಅದರೊಡನೆಯೇ ನಾವು ಜೀವನಶೈಲಿ, ಶ್ರದ್ಧೆ, ಸಂಸ್ಕಾರ ಮುಂತಾದವುಗಳನ್ನು ಕೂಡ ಕಲಿತೆವು. ಜೊತೆಗೆ ನಮಗೆ ಒಳ್ಳೆಯ ಸ್ನೇಹಿತರು, ಬಳಗವೂ ದೊರೆಯಿತು. ಗುರುಗಳು ಹೇಗೆ ಕೊರಿಯೊಗ್ರಫಿ ಮಾಡುತ್ತಾರೆ ಎಂದು ನಾನು ಗಮನವಿಟ್ಟು ನೋಡುತ್ತಿದ್ದೆ. ಅಲ್ಲಿಗೆ ಬಂದ ದೊಡ್ಡ ದೊಡ್ಡ ಕಲಾವಿದರೆಲ್ಲ, ಗುರುಗಳಲ್ಲಿ ನಮ್ಮ ಬಗ್ಗೆ ವಿಚಾರಿಸುತ್ತಿದ್ದರು. 'ವಾದ್ಯಾರೇ, ನೀವು ಟ್ರಾನ್ಸ್‌ಜೆಂಡರ್ಸ್ ಕಲಾವಿದರೊಬ್ಬರಿಗೆ ನೃತ್ಯ ಕಲಿಸುತ್ತಿದ್ದೀರಂತೆ. ಅವರನ್ನು ನಾವು ನೋಡಬಹುದೇ?'ಎಂದು ಕೇಳುತ್ತಿದ್ದರು. ವಾದ್ಯಾರ್, ನನ್ನನ್ನು ಕರೆದು ವರ್ಣಂ ಅನ್ನು ಅಥವಾ ಯಾವುದಾದರೂ ನೃತ್ಯ ತುಣುಕನ್ನು ಪ್ರಸ್ತುತಪಡಿಸಲು ಹೇಳುತ್ತಿದ್ದರು. ಬಂದವರಿಗೆ ಆಗಲೇ ನನ್ನ ಗುರುತು ಸ್ಪಷ್ಟವಾಗುತ್ತಿದ್ದುದು. ಟ್ರಾನ್ಸ್‌ಜೆಂಡರ್ ಎಂದರೆ ಅವರ ಮನಸ್ಸಿನಲ್ಲಿ ಅದಾಗಲೇ ಇದ್ದ ಕಲ್ಪನೆಯು ಅಳಿದು, ಒಂದು ವ್ಯಕ್ತಿತ್ವವನ್ನು ಅನ್ವಯಿಸಿ ಅವರು ನಮ್ಮ ಪರಿಚಯ ಮಾಡಿಕೊಳ್ಳುತ್ತಿದ್ದರು. ಎಷ್ಟೋ ಮಂದಿ ಕಲಾವಿದರು ನಂತರದಲ್ಲಿ ನನ್ನ ಸ್ನೇಹಿತರಾದರು. ವೈಜಯಂತಿಯಮ್ಮ, ಹೇಮಮಾಲಿನಿಯಮ್ಮ, ಸುಧಾರಾಣಿ ರಘುಪತಿ, ಯಾಮಿನಿ ಕೃಷ್ಣಮೂರ್ತಿಯಮ್ಮ... ಹೀಗೆ ಯಾರ ನೃತ್ಯವನ್ನೆಲ್ಲ ನಾನು ಟೂರಿಂಗ್ ಟಾಕೀಸ್‌ನ ಪರದೆಯಲ್ಲಿ ನೋಡಿ ಕಲಿತಿದ್ದೇನೋ, ಅವರೆಲ್ಲರೂ ಗುರುಗಳ ಮನೆಗೆ ಬರುತ್ತಿದ್ದರು. ಅವರೆಲ್ಲರೂ ನನ್ನನ್ನು ಸ್ನೇಹಿತೆಯಂತೆ ನೋಡುತ್ತಿದ್ದರು. ನೃತ್ಯ ಕಲಿಯುವ ನನ್ನದೊಂದು ಕನಸು ಈಡೇರಿತು. ನಾನು ಬಾಲ್ಯದಲ್ಲಿ ಕನಸಿನ ಚೆಂಡುಗಳನ್ನು ಆಕಾಶಕ್ಕೆಸೆದು ಅದು ಮರಳಿ ಬರುವುದನ್ನು ಕಾಯುತ್ತಿದ್ದೆನಲ್ಲ. ದೇವರು ಅದರಲ್ಲಿ ನನಗಾಗಿ ನೃತ್ಯವನ್ನು ಬರೆದು ಕಳಿಸಿಕೊಟ್ಟರು. ಇದಕ್ಕಿಂತ ದೊಡ್ಡ ಭಾಗ್ಯ ಇನ್ನೇನು ಬೇಕು ಹೇಳಿ.

### ◆ ಕೊರಿಯೊಗ್ರಫಿ ಕಲಿತಿರಾ? ಅದಕ್ಕೆ ಪೂರಕ ತಯಾರಿ ಹೇಗೆ ಮಾಡಿಕೊಳ್ಳುತ್ತಿದ್ದಿರಿ ?

ನನ್ನದು ಹುಡುಕಾಟದ ಬದುಕು. ಅಪ್ಪ ಅಮ್ಮ ತಮ್ಮ ಮಕ್ಕಳನ್ನು ಸಿದ್ಧಮಾಡಿ ಶಾಲೆಗೆ ಕಳುಹಿಸಿ, ನಂತರ ನೃತ್ಯ ತರಗತಿಗೆ ಕಳುಹಿಸುವ ಮಾದರಿಯ ನೆನಪುಗಳು ನನ್ನಲ್ಲಿ ಇಲ್ಲ. ಅವರ ಪೋಷಣೆಯಲ್ಲಿ ಎಲ್ಲವನ್ನೂ ಕಲಿಯುವ ಅವಕಾಶ ನನಗೆ ದೊರೆಯಲಿಲ್ಲ. ಮೊದಲನೆಯದ್ದಾಗಿ ನಾನು ಏನು ಎಂಬುದನ್ನೇ ನಾನೊಬ್ಬಳೇ ಹುಡುಕಿಕೊಳ್ಳಬೇಕಿತ್ತಲ್ಲ.

ಗುರುಗಳ ಮನೆಯಲ್ಲಿರುವಾಗ ನನಗೆ ತಮಿಳು ಸಾಹಿತ್ಯದ ಪರಿಚಯವಾಯಿತು. ಅವರು ನನಗೆ ತಮಿಳು ಸಾಹಿತ್ಯದ ಮಹತ್ವವನ್ನು ಹೇಳಿಕೊಟ್ಟರು. ಕೊರಿಯೊಗ್ರಫಿಗೆ ಬೇಕಾಗುವ ಸಾಹಿತ್ಯದ ಹೂರಣವನ್ನು ಹೇಗೆ ಗುರುತಿಸಬೇಕು ಎಂಬುದನ್ನು ಹೇಳಿಕೊಟ್ಟರು. ನಾನು ಹಳೆಯ ತಮಿಳು ಸಾಹಿತ್ಯವನ್ನು ಓದಲು ಶುರು ಮಾಡಿದ್ದು ನನ್ನ ಐಡೆಂಟಿಟಿಯನ್ನು ಕಂಡುಕೊಳ್ಳುವುದಕ್ಕೆ. ಅದಕ್ಕಾಗಿ ಹಳೆಯ ಸಾಹಿತ್ಯವನ್ನು ಓದುವ ಹುಕಿಗೆ ಬಿದ್ದೆ. ನನ್ನಂತೆಯೇ ಇರುವ ಯಾರಾದರೂ ಟ್ರಾನ್ಸ್‌ಜೆಂಡರ್ಸ್ ಉಲ್ಲೇಖ ಸಾಹಿತ್ಯದಲ್ಲಿ ಎಲ್ಲಿಯಾದರೂ ಇದೆಯಾ ಎಂದು